ಮಂಡ್ಯ ಜಿಲ್ಲಾ ಪೊಲೀಸ್

## -: ಪತ್ರಿಕಾ ಪ್ರಕಟಣೆ :-

### ಕೆ.ಆರ್.ಪೇಟೆ ಟೌನ್ ಪೊಲೀಸರ ಕಾರ್ಯಾಚರಣೆ ಜ್ಯುವಲೆರಿ ಶಾಪ್ ಗೋಡೆ ಕೊರೆದು ಕಳ್ಳತನ ಮಾಡಿದ ಆರೋಪಿಗಳ ಬಂಧನ. ಒಟ್ಟು 35 ಲಕ್ಷ 86 ಸಾವಿರದ ಮೌಲ್ಯದ ವಸ್ತುಗಳ ವಶ

ದಿನಾಂಕ:- 17/08/2023 ರಂದು ಪಿರ್ಯಾದಿರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯ ಹೊಸಹೊಳಲು-ಅಕ್ಕಿಹೆಬ್ಬಾಳು ಮುಖ್ಯ ರಸ್ತೆಯ ಲೀಲಾ ಬ್ಯಾಂಕರ್ಸ್ ಅಂಡ್ ಜ್ಯುವಲೆರಿ ಶಾಪ್‌ನ್ನು ಯಾರೋ ಕಳ್ಳರು ಅಂಗಡಿಯ ಹಿಂಭಾಗದಲ್ಲಿದ್ದ ವೆಂಟಿಲೇಟರ್ ಸರಳನ್ನು ಗ್ಯಾಸ್ ಕಟರ್‌ನಿಂದ ಕಟ್ ಮಾಡಿ ಗೋಡೆ ಕೊರೆದು ಒಳಗೆ ಬಂದು ಶೋಕೇಸ್‌ನಲ್ಲಿ ವ್ಯಾಪಾರಕ್ಕೆಂದು ಇಟ್ಟಿದ್ದ ಬೆಳ್ಳಿಯ ಪದಾರ್ಥಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ದೂರು ನೀಡಿದ್ದು ಅದರಂತೆ ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣೆಯಲ್ಲಿ ಮೊ.ನಂ 183/2023 ಕಲಂ 457-380 ಐ.ಪಿ.ಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತೆ.

ಈ ಮೇಲ್ಕಂಡ ಪ್ರಕರಣದ ಆರೋಪಿ ಮತ್ತು ಮಾಲು ಪತ್ತೆ ಸಂಬಂಧ ಮಾನ್ಯ ಎಸ್.ಪಿ ಮಂಡ್ಯ ರವರು ಕೆ.ಆರ್.ಪೇಟೆ ಟೌನ್‌ನ ಪಿಐ , ಪಿಎಸ್ಐ ಮತ್ತು ಸಿಬ್ಬಂದಿಗಳನ್ನೊಳಗೊಂಡತೆ ತಂಡವನ್ನು ರಚನೆ ಮಾಡಿದ್ದು, ಸದರಿ ತಂಡವು ಆರೋಪಿಗಳನ್ನು ಪತ್ತೆ ಮಾಡಿ ಈ ಕೆಳಕಂಡ ಪ್ರಕರಣಗಳು ಮತ್ತು ಮಾಲನ್ನು ಪತ್ತೆ ಮಾಡಿದ್ದು.

## ಪತ್ತೆಯಾದ ಪ್ರಕರಣಗಳ ವಿವರ:-

1) ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣಾ ಮೊ.ನಂ- 183/2023 ಕಲಂ 457-380 ಐ.ಪಿ.ಸಿ
2) ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣಾ ಮೊ.ನಂ- 134/2023 ಕಲಂ 457-380 ಐ.ಪಿ.ಸಿ
3] ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣಾ ಮೊ.ನಂ- 150/2023 ಕಲಂ 457-380 ಐ.ಪಿ.ಸಿ
4] ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣಾ ಮೊ.ನಂ- 168/2023 ಕಲಂ 457-380 ಐ.ಪಿ.ಸಿ
5] ಮಂಡ್ಯ ಪಶ್ಚಿಮ ಠಾಣಾ ಮೊ.ನಂ 133/2022 ಕಲಂ 454-457-380 ಐ.ಪಿ.ಸಿ
6] ಹಲಗೂರು ಪೊಲೀಸ್ ಠಾಣಾ ಮೊ.ನಂ 136/2023 ಕಲಂ 379 ಐ.ಪಿ.ಸಿ
7] ಮಂಡ್ಯ ಸೆಂಟ್ರಲ್ ಪೊಲೀಸ್ ಠಾಣಾ ಮೊ.ನಂ 96/2023 ಕಲಂ 379 ಐ.ಪಿ.ಸಿ
8] ಚನ್ನರಾಯಪಟ್ಟಣ ಗ್ರಾಮಾಂತರ ಪೊಲೀಸ್ ಠಾಣಾ ಮೊ.ನಂ 148/2023 ಕಲಂ 379 ಐ.ಪಿ.ಸಿ
9] ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣಾ ಮೊ.ನಂ 237/2023 ಕಲಂ 379 ಐ.ಪಿ.ಸಿ
10] ಉದಯಗಿರಿ ಪೊಲೀಸ್ ಠಾಣೆ ಮೊ.ನಂ 112/2023 ಕಲಂ 457-380 ಐ.ಪಿ.ಸಿ
11] ಬನ್ನೂರು ಪೊಲೀಸ್ ಠಾಣಾ ಮೊ.ನಂ 297/2023 ಕಲಂ 379 ಐ.ಪಿ.ಸಿ

ಈ ಮೇಲ್ಕಂಡ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಕಳ್ಳತನವಾಗಿರುವ 154 ಗ್ರಾಂ ಚಿನ್ನ, 20 ಕೆ.ಜಿ ಬೆಳ್ಳಿಯ ಪದಾರ್ಥಗಳು, 01 ಅಶೋಕ ಲೈಲ್ಯಾಂಡ್ ವಾಹನ, 01 ಎರಿಟಿಕಾ ಕಾರು, 01 ಯಮಹಾ ಆರ್.ಎಕ್ಸ್ ಬೈಕ್, 01 ಲ್ಯಾಪ್ ಟಾಪ್, 08 ಹೆಚ್.ಎಫ್ ಇಲಾತಿ ಹಸುಗಳು, 01 ಎಲ್.ಪಿ.ಜಿ ಸಿಲಿಂಡರ್, 01 ಆಕ್ಸಿಜನ್ ಸಿಲಿಂಡರ್, 01 ವಾಟರ್ ಟ್ಯಾಂಕ್, ಗ್ಯಾಸ್ ಕಟರ್ ಮತ್ತು ನಗದು 40000/- ರೂ ಗಳನ್ನು ವಶಪಡಿಸಿಕೊಂಡಿದ್ದು ಇವುಗಳ

ಒಟ್ಟು ಅಂದಾಜು ಮೌಲ್ಯ ಸುಮಾರು 35 ಲಕ್ಷದ 86 ಸಾವಿರವಾಗಿರುತ್ತದೆ.

ಮೇಲ್ಕಂಡ ಪ್ರಕರಣಗಳಲ್ಲಿ ಆರೋಪಿಗಳು ಮತ್ತು ಮಾಲನ್ನು ವಶಪಡಿಸಿಕೊಳ್ಳಲು ಶ್ರಮಿಸಿದ ಅಧಿಕಾರಿಗಳು ಹಾಗೂ ಸಿಬ್ಬಂದಿಯವರ ತಂಡವನ್ನು ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ಯತೀಶ್.ಎನ್, ಐ.ಪಿ.ಎಸ್ ರವರು ಪ್ರಶಂಸಿಸಿರುತ್ತಾರೆ.






Ujjivan